ಸಮಾಧಾನವಾಗದೆ ಮತ್ತೆ ಅವರ ಹತ್ತಿರ ಬಂದು, ಗದ್ದ ಮತ್ತು ತಲೆಗಳನ್ನು ಮೇಲೆ ಕೆಳಗೆ ಮಾಡುವ ಕೆಲಸವನ್ನು ಅನೇಕ ಸಲ ಪುನರಾವರ್ತನೆ ಮಾಡಿದ. ಫೋಟೊ ತೆಗೆಯುವ ಕೆಲಸ ಇಷ್ಟೊಂದು ಕಷ್ಟದ ಕೆಲಸವೆಂದು ಆ ಮಕ್ಕಳಿಗೆ ತಿಳಿದಿರಲಿಲ್ಲ.

ಕೊನೆಗೆ ಅವರಿಗೆ ಅಲುಗಾಡದಿರಲು ಹೇಳಿದ ಅನಂತರ, ಆತ ಎಲ್ಲ ಲೈಟುಗಳನ್ನು ಹಾಕಿ, ಮಕ್ಕಳ ಕಣ್ಣುಗಳನ್ನು ಕುಕ್ಕುವಂತೆ ಮಾಡಿದ. ಆ ಅಬ್ಬರದ ಬೆಳಕಿಗೆ ಅವರು ಕಣ್ಣುಗಳನ್ನು ತೆರೆಯಲು ಸಾಧ್ಯವಾಗದಂತಾಯಿತು.

"ಆಲ್ ರೈಟ್ ರೆಡಿ, ವನ್ ಟು ತ್ರೀ..." ಕ್ಲಿಕ್.

ಆತ ಕ್ಯಾಮರಾದ ಹಿಂದೆ ನಿಂತು ತಲೆಯೆತ್ತಿ ಒಂದೊಂದೆ ಲೈಟುಗಳನ್ನು ಆರಿಸಿದ. ಫೋಟೊ ತೆಗೆದಾಯಿತು, ಎನ್ನುವುದು ಮಕ್ಕಳಿಗೆ ತಿಳಿಯಿತು. ಅವರಿಗೇನೋ ಒಂದು ರೀತಿಯ ಸಮಾಧಾನ.

"ಮಗು ನಿನ್ನ ಹೆಸರು ಹೇಳಲಿಲ್ಲವಲ್ಲ." ಹೆಣ್ಣುಮಗಳ ಹತ್ತಿರ ಆತ ಕೇಳಿದ.

"ಅವಳ ಹೆಸರು ಷೀನಾ. ನನ್ನ ಹೆಸರು ಅಭಿಲಾಷ್." ಅವನು ಹೇಳಿದ.

"ಇಬ್ಬರ ಹೆಸರುಗಳೂ ಚೆನ್ನಾಗಿವೆ..."

ಆತ ಅವರಿಬ್ಬರ ತಲೆಯನ್ನು ನೇವರಿಸಿ ತನ್ನ ಪ್ರೀತಿ ವಾತ್ಸಲ್ಯವನ್ನು ವ್ಯಕ್ತಪಡಿಸಿದ.

"ಹನ್ನೆರಡು ರೂಪಾಯಿಗಳನ್ನು ಕೊಟ್ಟು ಮಕ್ಕಳಿಬ್ಬರೂ ಹೋಗಬಹುದು... ನಾಡಿದ್ದು, ಇದೇ ಸಮಯಕ್ಕೆ ಬಂದರೆ, ಫೋಟೊ ಸಿಗತ್ತೆ."

ಅವಳು ಕರ್ಚೀಫಿನ ಗಂಟುಬಿಚ್ಚಿ ಅದರಲ್ಲಿದ್ದ ಚಿಲ್ಲರೆಗಳನ್ನು ಆತನಿಗೆ ಕೊಟ್ಟಳು. ಅದರಲ್ಲಿ ಮೂರೂವರೆ ರೂಪಾಯಿಗಳು ಮಾತ್ರ ಇದ್ದವು.

"ಉಳಿದದ್ದು ಎಲ್ಲಿದೆ ಮಗೂ?..." ಆತ ಅವಳ ಹತ್ತಿರ ಕೇಳಿದ.

ಮಕ್ಕಳಿಬ್ಬರೂ ಪರಸ್ಪರ ಮುಖ ನೋಡಿಕೊಂಡರು.

"ಇದೊಳ್ಳೆ ಕಥೆಯಾಯ್ತಲ್ಲ! ನನಗೇ ಮೋಸ ಮಾಡುವ ಆಲೋಚನೆಯೇನು?... ಪೂರ್ತಿ ಹಣ ಕೊಡದೆ ನಾನು ಫೋಟೊ ಕೊಡಲ್ಲ..."

ಅವರಿಗೆ ಅಳುಬರುವಂತಾಯಿತು. ಪಿಗ್ಗಿಬ್ಯಾಂಕಿನಲ್ಲಿ ಇನ್ನೇನು ಉಳಿದಿಲ್ಲ. ಬಾಕಿ ಹಣಕ್ಕೆ ಎಲ್ಲಿಗೆ ಹೋಗೋದು? ಯಾರ ಹತ್ತಿರ ಕೇಳೋದು?

"ಅಯ್ಯೋ... ಇದೇನಿದು ಮಗಳೇ ಅತ್ತಿದಿಯಾ?... ಅಳುವುದೇನೂ ಬೇಡ. ನಾನು ಹೇಳೋದನ್ನು ಕೇಳಿದರೆ ಸಾಕು.. ಒಂದು ಪೈಸಾನೂ ಕೊಡೋದು ಬೇಡ. ಫೋಟೊ ಕೊಡ್ತಿನಿ..."

ಅವರಿಬ್ಬರು ತುಂಬ ಆಕಾಂಕ್ಷೆಯಿಂದ ಆತನ ಮುಖದೆಡೆಗೆ ನೋಡಿದರು. ಆತ ಒಂದು ಮಗುವಿನಂತೆ ನಗುತ್ತಲೇ ಇದ್ದ.

"ಬನ್ನಿ... ಒಳಗಡೆ ಬನ್ನಿ..."

ಆತ ಮತ್ತೆ ಲೈಟುಗಳನ್ನು ಸರಿಮಾಡತೊಡಗಿದ. ಬೆಳಕಿನ ವ್ಯವಸ್ಥೆಯನ್ನು ಸರಿಪಡಿಸಿದ ಅನಂತರ, ಆತ ಅವರಿಬ್ಬರನ್ನೂ ನೋಡಿ ಮತ್ತೊಮ್ಮೆ ನಕ್ಕ.

"ನಾನಂತು ಒಂದು ಪೈಸೆಯನ್ನು ಕೇಳೊದಿಲ್ಲ. ನೀವು ಕೊಡೋದು ಬೇಡ. ನೀವಿಬ್ಬರೂ ಬಟ್ಟೆ ಕಳಚಿ ಅಲ್ಲಿಗೆ ಹೋಗಿ ನಿಲ್ಲಿ..."

ಮಕ್ಕಳಿಬ್ಬರೂ ಆತನನ್ನು ಎವೆಯಿಕ್ಕದೆ ನೋಡಿದರು.

"ನನ್ನ ಹತ್ರ ಆಟ ಆಡೋದಿಕ್ಕೆ ನೋಡಿದ್ರಲ್ವಾ?... ಫೋಟೊ ತೆಗೆದಮೇಲೆ ಹಣ ಇಲ್ಲಾಂತ ಹೇಳಿದ್ರಲ್ವಾ?... ಇಬ್ಬರನ್ನೂ ಪೊಲೀಸರಿಗೆ ಒಪ್ಪಿಸಿ ಬಿಡ್ತಿನಿ... ನೋಡ್ತಾ ಇರಿ..."

ಮಕ್ಕಳಿಬ್ಬರೂ ತುಟಿ ಅಲುಗಾಡಿಸದೆ ನಿಂತಿದ್ದರು.